



ಅಚ್ಚಾದ ಸಿದ್ದ ರಂಗೋಲಿಗಳನ್ನು ಅಂಟಿಸುವ ಕ್ರಮ ಬಂದಿದೆ. ಬದಲಾದ ದಿನಮಾನಗಳಲ್ಲಿ ರಂಗೋಲಿ ಹಾಕುವುದು ವ್ಯಾಪಾರ ಆಗಿದೆ. ಹಬ್ಬಹರಿದಿನಗಳಲ್ಲಿ ಮನೆಗಳಿಗೆ ಹೋಗಿ ರಂಗೋಲಿ ಹಾಕುವವರು ಇದ್ದಾರೆ. ಜನರು ಕೆಲಸದ ಒತ್ತಡ, ಆಧುನಿಕತೆಗೆ ಸಂದಾಯವಾಗಿರುವ ಕಾರಣ ಈ ದಿನಗಳಲ್ಲಿ ಪುಡಿಯ ರಂಗೋಲಿ ನೇಪಥ್ಯಕ್ಕೆ ಸರಿಯುತ್ತಿದೆ.

ಇನ್ನೂ ಒಂದು ಹೆಜ್ಜೆ ಮುಂದುವರೆದು ಹೇಳಬೇಕೆಂದರೆ ಮನೆಯೊಡತಿಗೆ ಮನೆ ಬಾಗಿಲು ಸಾರಿಸಿ ರಂಗೋಲಿ ಹಾಕಲು ಸಮಯವಿಲ್ಲ. ಕೆಲಸದವರಿಗೆ ಈ ಕೆಲಸ ಹಚ್ಚುತ್ತಾರೆ. ಇನ್ನು ಅಪಾರ್ಟ್‌ಮೆಂಟ್ ವಾಸಿಗಳಿಗೆ ವಿಸ್ತಾರವಾದ ರಂಗೋಲಿ ಹಾಕಲು ಸ್ಥಳವಿಲ್ಲ. ಹೀಗೋ ಎರಡು ಚಿಕ್ಕ ಚಿಕ್ಕ ಎಳೆ ಎಳೆದು ಸುಮ್ಮನಾಗಬೇಕಷ್ಟೆ. ಆದರೆ ನಾಗರಿಕತೆಯ ಧೂಳಿಗೆ ದೂರವಾಗಿರುವ ಜನಪದದ ವಸತಿ ಪ್ರದೇಶಗಳಲ್ಲಿ ಬುಡಕಟ್ಟು ಜನಾಂಗಗಳಲ್ಲಿ ಈ ದೃಶ್ಯಕಲೆ ಇನ್ನೂ ಜೀವಂತವಾಗಿದೆ. ರಂಗೋಲಿಗಳನ್ನು ಅಕ್ಕಿಹಿಟ್ಟು, ಹುಡಿಮಣ್ಣು (ಕೆಂಪುಮಣ್ಣು) ಸುಣ್ಣ ಇತ್ಯಾದಿಗಳನ್ನು ಬಳಸಿ ಹಾಕುವುದಿದೆ. ಇವತ್ತಿಗೆ ರಂಗೋಲಿ ಪುಡಿಗೂ ತತ್ವಾರ ಪರ್ಯಾಯವಾಗಿ ಜಲ್ಲಿಪುಡಿ ಹಿಡಿದು ರಂಗೋಲಿ ಹಾಕುತ್ತಾರೆ. ಬಣ್ಣಕ್ಕೆ ಹುರಿಮಂಜು (ಇದ್ದಿಲು), ಚಂದ್ರ ಇತ್ಯಾದಿಗಳನ್ನು ಅರಿಶಿಣ ಕುಂಕುಮಗಳನ್ನು ಬಳಸುವುದು ವಾಡಿಕೆ ಆದರೆ ಕಪ್ಪುಬಣ್ಣ ನಿಷಿದ್ಧ (ಕಪ್ಪು ಬಣ್ಣ ಬೇಕೆಂದರೆ ರಾಗಿಹುಡಿ ತೆಂಗಿನ ಚಿಪ್ಪಿನ ಚೂರುಗಳನ್ನು ಕುದಿಸಿ ಬಣ್ಣ ತಯಾರಿಸುತ್ತಿದ್ದರು) ರಂಗೋಲಿಗೆ ಮೂಲ ವಸ್ತು ಎಂದರೆ ಬಿಳಿಯ ಪುಡಿ ಈ ಬಿಳಿ ಬಣ್ಣಕ್ಕೆ ವಿಷಜಂತುಗಳು, ಚೇಳು, ಜರಿಗಳು ಮನೆ ಪ್ರವೇಶಿಸುವುದಿಲ್ಲ ಎಂಬ ನಂಬಿಕೆ ಹಿರಿಯರದ್ದಾಗಿತ್ತು. ಮುಂಜಾನೆ ಎದ್ದು ಶುಭ್ರವಾದ ವಾಯು ಸ್ವೀಕರಣೆಗೆ, ವ್ಯಾಯಾಮಕ್ಕೆ ದೇಹ ಬಾಗಿಸುವ ಕ್ರಮ ಈ ರಂಗೋಲಿಯಲ್ಲಿದೆ.

ರಂಗೋಲಿ ಹಾಕುವುದು ಕೇವಲ ಸಂಸ್ಕೃತಿಯ ಸಂಕೇತವಲ್ಲ, ವಿಜ್ಞಾನವೂ, ಯೋಗ ವಿಜ್ಞಾನವೂ ಇಲ್ಲಿದೆ. ರಂಗೋಲಿ ಹಾಕುವಾಗ ನಾವು ಎಡಕೈಯಲ್ಲಿ ರಂಗೋಲಿ ಪುಡಿಯ ಬಟ್ಟಲನ್ನು ಹಿಡಿದು, ಬಲಗೈಯ ಹೆಬ್ಬೆರಳು ತೋರುಬೆರಳುಗಳನ್ನು ಉಪಯೋಗಿಸುವುದಿದೆ. ಇದು ಜ್ಞಾನ ಮುದ್ರೆಯ ಸಂಕೇತವಾಗಿದೆ. ಹೆಬ್ಬೆರಳು ಅಗ್ನಿತತ್ತ್ವವನ್ನು, ತೋರ್ಬೆರಳು ಭೂಮಿ ತತ್ತ್ವವನ್ನೂ ಉದ್ದೀಪಿಸುತ್ತದೆ. ನಡುಬಗ್ಗಿಸಿದಾಗ ಅದು ದ್ವಿಪಾದ ಹಸ್ತಾಸನವನ್ನು ಹೋಲುತ್ತದೆ. ಕೆಲವರು ಮುಷ್ಟಿಯಲ್ಲಿ ರಂಗೋಲಿ ಪುಡಿ ಹಿಡಿದು ಅದು ಮುಗಿಯುವವರೆಗೂ ಹಾಕುವುದಿದೆ.

ರಂಗೋಲಿ ಎಂದರೆ ಹೇಗ್ಗೇಗೋ ಚಿತ್ರ ಬಿಡಿಸಲು ಸಾಧ್ಯವಿಲ್ಲ ಅಲ್ಲೂ ಒಂದು ಲೆಕ್ಕಚಾರವಿರುತ್ತದೆ. ರಂಗೋಲಿ ಏಕಾಗ್ರತೆಯನ್ನು ಹೆಚ್ಚಿಸುವುದರ ಜೊತೆಗೆ ಒತ್ತಡವನ್ನು ನಿವಾರಿಸುತ್ತದೆ. ಇಲ್ಲಿ ಹೊರಗಿನವರ ಮೆಚ್ಚುಗೆಗಿಂತ ಅಂತರಂಗದ ಇಚ್ಛೆ, ಸ್ವಯಂ ಮೆಚ್ಚುಗೆಯು ಮುಖ್ಯ ಮತ್ತು ಇದು ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ರಂಗೋಲಿ ಪುಡಿಯಲ್ಲಿ ಸ್ತ್ರೀಯರ ಶರೀರಕ್ಕೆ ಅಗತ್ಯವಿರುವ ಸತುವಿನ ಅಂಶವಿರುತ್ತದೆ. ರಂಗೋಲಿ ಬಿಡಿಸುವ ಕ್ರಿಯೆಯ ಮೂಲಕ ಈ ಅಂಶ ಸ್ತ್ರೀಯರ ದೇಹಕ್ಕೆ ಸೇರ್ಪಡೆಯಾಗುತ್ತದೆ. ಆದುದರಿಂದ ಪ್ರತಿದಿನ ರಂಗೋಲಿ ಬಿಡಿಸುವುದರಿಂದ ಮುಖ ತೇಜಸ್ಸಿನಿಂದ ಕೂಡಿ ಆರೋಗ್ಯ ವೃದ್ಧಿಸುತ್ತದೆ. ಮನೆಗೆ ಬಂದ ಅತಿಥಿ, ಅಭ್ಯಾಗತರನ್ನು ಸ್ವಾಗತಿಸುವ ಸ್ವಾಗತಕಾರಿಣಿ ರಂಗೋಲಿಗಳು ಅಂದರೆ ಸ್ವಾಗತಕಾರರ ಕೆಲಸ ಕಾರ್ಯನಿರ್ವಹಿಸುತ್ತವೆ. ಒಂದೊಳ್ಳೆಯ ರಂಗೋಲಿ ನೋಡುಗರಲ್ಲಿ ಸಂತೋಷದ ಭಾವನೆ ಉದ್ದೀಪಿಸುತ್ತದೆ. ಜಾನಪದರು, ಇಂಥ ರಂಗೋಲಿಗಳಿಂದ ಧನಾತ್ಮಕಶಕ್ತಿ ಹಾಗೂ ದೈವಶಕ್ತಿ ಹೆಚ್ಚುತ್ತದೆ ಎಂದು ಭಾವಿಸಿದ್ದರು. ಆದುದರಿಂದ ರಂಗೋಲಿ ಸಾಮಾಜಿಕ, ಆರೋಗ್ಯದ, ಆಧ್ಯಾತ್ಮಿಕತೆಯ ಸಂಕೇತವೂ ಆಗಿದೆ.

ಭಾರತೀಯ ರಂಗೋಲಿಗಳಲ್ಲಿ ಪರ್ವತ ಪ್ರಾಂತ್ಯ, ಕರಾವಳಿ ಮತ್ತು ಮೈದಾನ ಪ್ರಾಂತ್ಯಗಳಲ್ಲಿ ವಿಭಿನ್ನವಾಗಿ ಮೂಡಿಬರುತ್ತವೆ. ಪರ್ವತ ಪ್ರಾಂತ್ಯ ಅಂದರೆ ರಾಜಸ್ಥಾನ, ಉತ್ತರಪ್ರದೇಶ, ಹಿಮಾಚಲ ಪ್ರದೇಶ ಇಲ್ಲಿ ಬಿಡಿಸುವ ರಂಗೋಲಿ ರೇಖೆಗಳನ್ನು ಕೂಡಿಕೊಂಡಿದ್ದು ಅಗಲದ್ದಾಗಿರುತ್ತದೆ. ಚಿಕ್ಕಚಿಕ್ಕ ರೇಖೆಗಳನ್ನು ಬಳಸಿ ಬಂಗಾಲ ಮತ್ತು ಬಿಹಾರ ಪ್ರಾಂತ್ಯದವರು ಬಿಡಿಸುತ್ತಾರೆ. ಇವೆರಡರ ಜೊತೆಗೆ ಬಳ್ಳಿಗಳ ರಂಗೋಲಿ ಕರ್ನಾಟಕ, ಆಂಧ್ರ, ತಮಿಳುನಾಡಿನಲ್ಲಿದೆ, ಕೇರಳದವರ ಪುಷ್ಪರಂಗೋಲಿಯಂತೂ ವಿಶ್ವವಿಖ್ಯಾತ. ಓಣಂ ಆಚರಣೆಯ ಅವಿಭಾಜ್ಯ ಅಂಗ ಎಂದರೆ ಈ ಪುಷ್ಪ ರಂಗೋಲಿ ತಮಿಳರು ಸಿಕ್ಕುಕೋಲಂ, ಕುಬೇರಕೋಲಂ, ಪುತ್ತರೆರಡು ಕೋಲಂ, ಕಲ್ಯಾಣಕೋಲಂ ಪಡಿಕೋಲಂ, ಅರಸಿಮಾವು ಕೋಲಂ ಎಂದೆಲ್ಲ ಕರೆಯುವುದಿದೆ.

ರಂಗೋಲಿ ಮನೆಯೊಡತಿಯ ಕಲಾನೈಪುಣ್ಯತೆ, ಕಲ್ಪನಾಶಕ್ತಿ ಸೃಜನಶೀಲತೆ ಹಾಗೂ ಅಭಿವ್ಯಕ್ತಿಯ ಸಂಕೇತವೂ ಹೌದು. ಮಹಿಳೆಯರ ಮೊದಲ ಮಾತುಕತೆ ರಂಗೋಲಿ ಹಾಕುವ ಸ್ಥಳದಿಂದಲೇ ಪ್ರಾರಂಭವಾಗುವುದು. ಹಿಂದೆ ಯಾವ ಮನೆಯ ಮುಂದೆ ರಂಗೋಲಿ ಹಾಕಿರುತ್ತಿರಲಿಲ್ಲವೂ ಆ ಮನೆಯಾಕೆಗೆ ಏನೋ ತೊಂದರೆ ಎಂದು ತಿಳಿದು ನೆರೆಹೊರೆಯವರು ಆಕೆಯ ಸಹಾಯಕ್ಕೆ ಧಾವಿಸುವುದು ಇತ್ತು. ಆದರೆ ಇಂದಿನ ದಿನಮಾನಗಳಲ್ಲಿ ಕಳ್ಳರಿಗೆ ಮನೆಯಲ್ಲಿ ಯಾರು ಇಲ್ಲ ಎಂದು ತೀರ್ಮಾನಿಸಲು ಮಾನದಂಡ ಅಲ್ಲವೇ?

ರಂಗೋಲಿ ಪುಡಿಯೊಂದಿಗೆ ಮಿಶ್ರಣ ಮಾಡುವ ಬಣ್ಣಗಳು ಹಾನಿಕಾರಕ ಹಾಗೂ ಕೆಟ್ಟ ರಾಸಾಯನಿಕಗಳಿಂದ ಕೂಡಿರುತ್ತದೆ. ಇಂಥದ್ದು ದೇಹದೊಳಗೆ ಸೇರಿದರೆ ಅಲರ್ಜಿ ಉಂಟಾಗುತ್ತದೆ. ಇಂತಹ ಬಣ್ಣಗಳನ್ನು ಉಪಯೋಗಿಸುವಾಗ ಮಕ್ಕಳ ಕಡೆ ಗಮನಹರಿಸಬೇಕು.

